# ಹಿಂದಿಯ ಎರಡು ಕಥೆಗಳು

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಚಿತ್ರಗಳು: ಶಶಿಧರ ಹಳೇಮನಿ



## ಬಾಲಕ

ಶಿಷ್ಯನೊಬ್ಬನಿಗೆ ಗುರುಗಳೊಂದಿಗೆ ಮನಸ್ತಾಪವಾಯಿತು. ಅವನು ಆಶ್ರಮವನ್ನು ತೊರೆದು ಹೋದ. ಗುರುಗಳು ತನ್ನ ಜ್ಞಾನವನ್ನು ಗೌರವಿಸುವುದಿಲ್ಲ, ತನ್ನ ಜೊತೆಗಾರರೂ ಸಹ ತನಗೆ ತಕ್ಕ ಗೌರವವನ್ನು ಕೊಡುವುದಿಲ್ಲ, ಆಶ್ರಮದಲ್ಲಿದ್ದರೆ ಏನೂ ಲಭಿಸುವುದಿಲ್ಲ, ಇನ್ನು ತಾನೇ ತನ್ನ ಶಿಷ್ಯರನ್ನು ಕಟ್ಟಿಕೊಳ್ಳುವೆ ಎಂದು ಯೋಚಿಸಿ ಅವನು ಹೊರಟು ಹೋಗಿದ್ದ.

ಅವನು ಒಂದು ಕಾಡಿನಲ್ಲಿ ಹಾದು ಹೋಗುತ್ತಿರುವಾಗ, ಅಲ್ಲಿ ಬಾಲಕನೊಬ್ಬನನ್ನು ಕಂಡ. ಆ ಬಾಲಕ ಕೈಯಲ್ಲಿ ಒಂದು ಉರಿಯುತ್ತಿದ್ದ ಮೇಣದಬತ್ತಿಯನ್ನು ಹಿಡಿದುಕೊಂಡು ಹೋಗುತ್ತಿದ್ದ. ಅವನು ತಮಾಷೆಗಾಗಿ ಬಾಲಕನನ್ನು ಕೇಳಿದ, ಈ ಮೇಣದಬತ್ತಿಯನ್ನು ನೀನು ಹೊತ್ತಿಸಿದೆಯಾ?

ಹೌದು, ನಾನೇ ಹೊತ್ತಿಸಿದ್ದೇನೆ. ಎಂದ ಬಾಲಕ.

ಮೇಣದಬತ್ತಿ ಹಿಂದಿನ ಕ್ಷಣದಲ್ಲಿ ಆರಿ ಹೋಗಿತ್ತು; ಮತ್ತೆ ಈ ಮೇಣದಬತ್ತಿ ಉರಿಯಿತು. ಆ ಬೆಳಕು ಎಲ್ಲಿಂದ ಬಂತು ಎಂಬುದನ್ನು ನೀನು ಹೇಳಬಲ್ಲೆಯಾ?

ಬಾಲಕ ನಕ್ಕು ಮೇಣದಬತ್ತಿಯನ್ನು ನಂದಿಸುತ್ತಾ ಹೇಳಿದ, ಈಗ ನೀವು ಬೆಳಕು ಹೋಗುವುದನ್ನು ನೋಡಿದಿರ, ಅದೆಲ್ಲಿಗೆ ಹೋಯಿತು? ನೀವೇ ಹೇಳಿ!

ಗುರುವಾಗಲು ಹೊರಟ ಶಿಷ್ಯನ ಅಹಂಕಾರ ಚೂರುಚೂರಾಯಿತು. ಅವನಲ್ಲಿದ್ದ ಜ್ಞಾನದ ಅಹಂಕಾರ ಸಹ ಕರಗಿತು. ಇದ್ದಕ್ಕಿದ್ದಂತೆ ಅವನಿಗೆ ತನ್ನ ಮೂರ್ಖತನದ ಅರಿವಾಯಿತು. ಅವನು ತನ್ನ ಮನಸ್ಸಿನಲ್ಲಿದ್ದ ಪೊಳ್ಳು ಜ್ಞಾನದಿಂದ ಹೊರ ಬಂದ. ಶಿಷ್ಯನಾಗುವುದರ ಅರ್ಥ, ಪ್ರತಿ ಕ್ಷಣವೂ ಪ್ರತಿಯೊಂದು ದಿಕ್ಕಿನಿಂದಲೂ ಕಲಿಯಲು ಸಿದ್ಧನಾಗಿರುವುದು ಎಂಬುದು ಈಗ ಅವನಿಗೆ ಮನದಟ್ಟಾಯಿತು. ■

## ಒಣಗಿದ ಎಲೆಗಳು

ಅದೊಂದು ಗುರುಕುಲ. ಮೂವರು ತಮ್ಮ ವಿದ್ಯಾಭ್ಯಾಸ ಮುಗಿಸಿದ ನಂತರ, ಗುರುಗಳು ಗುರುದಕ್ಷಿಣೆಯಲ್ಲಿ ತಮ್ಮಿಂದ ಏನು ಬಯಸುತ್ತಾರೆಂದು ತಿಳಿಯಲು ಬಯಸಿದರು. ಗುರುಗಳು ಮಂದವಾಗಿ ಮುಗುಳ್ನಗುತ್ತಾ ಹೇಳಿದರು, ನನಗೆ ನಿಮ್ಮಿಂದ ಗುರುದಕ್ಷಿಣೆಯಲ್ಲಿ ಒಂದು ಚೀಲದ ತುಂಬಾ ಒಣ ಎಲೆಗಳು ಬೇಕು. ತಂದು ಕೊಡುವಿರಾ? ಮೂವರು ಶಿಷ್ಯರು ಮನಸ್ಸಿನಲ್ಲಿ ಖುಷಿಪಟ್ಟರು. ತಾವು ತುಂಬಾ ಸುಲಭವಾಗಿ ಗುರುಗಳ ಆಸೆಯನ್ನು ಈಡೇರಿಸಬಹುದು, ಒಣ ಎಲೆಗಳು ಕಾಡಿನಲ್ಲಿ ಹೇರಳವಾಗಿ ಬಿದ್ದಿರುತ್ತವೆ ಎಂದು ಅವರಿಗೆ ಅನ್ನಿಸಿತು.

ಮೂವರು ಶಿಷ್ಯರು ಒಂದು ಕಾಡಿಗೆ ಹೋದರು. ಆದರೆ ಅಲ್ಲಿ ಒಂದು ಮುಷ್ಟಿಯಷ್ಟು ಮಾತ್ರ ಒಣ ಎಲೆಗಳಿದ್ದವು. ಅವರಿಗೆ ಆಶ್ಚರ್ಯದೊಂದಿಗೆ ದುಃಖವಾಯಿತು. ಕಾಡಿನಿಂದ ಒಣ ಎಲೆಗಳನ್ನು ಯಾರು ತೆಗೆದುಕೊಂಡು ಹೋಗಿರಬಹುದೆಂದು ಯೋಚಿಸಿದರು. ಆಗಲೇ ದೂರದಿಂದ ಒಬ್ಬ ರೈತ ಬರುತ್ತಿರುವುದನ್ನು ಅವರು ನೋಡಿದರು. ಅವರು ಅವನ ಬಳಿಗೆ ಹೋಗಿ, ನೀನು ನಮಗೆ ಒಂದು ಚೀಲದ ತುಂಬಾ ಒಣ ಎಲೆಗಳನ್ನು ಕೊಡು ಎಂದು ವಿನಂತಿಸಿಕೊಂಡರು.

ರೈತ ಅವರಲ್ಲಿ ಕ್ಷಮೆಯಾಚಿಸಿ, ನಾನು ನಿಮಗೆ ಸಹಾಯವನ್ನು ಮಾಡಲಾರೆ ಎಂದ. ಅವನು ಈ ಮೊದಲೇ ಒಣ ಎಲೆಗಳನ್ನು ಇಂಧನದ ರೂಪದಲ್ಲಿ ಉಪಯೋಗಿಸಿದ್ದ. ಈಗ ಮೂವರು ಶಿಷ್ಯರು ಸಮೀಪದಲ್ಲಿದ್ದ ಒಂದು ಹಳ್ಳಿಗೆ ಹೋದರು. ಅಲ್ಲಿ ತಮಗೆ ಯಾರಾದರೂ ಸಹಾಯ ಮಾಡಬಹುದೆಂದು ಅವರು ಯೋಚಿಸಿದ್ದರು. ಅಲ್ಲಿ ಅವರು ಒಬ್ಬ ವ್ಯಾಪಾರಿಯನ್ನು ನೋಡಿ, ತುಂಬಾ ಆಸೆಯಿಂದ ಒಂದು ಚೀಲದ ತುಂಬಾ ಒಣ ಎಲೆಗಳನ್ನು ಕೊಡುವಂತೆ ಅವನಲ್ಲಿ ವಿನಂತಿಸಿಕೊಂಡರು. ಆದರೆ ಅವರಿಗೆ ಮತ್ತೆ ನಿರಾಸೆಯಾಯಿತು. ಆ ವ್ಯಾಪಾರಿ ಈ ಮೊದಲೇ ಅಲ್ಪ

## ಬಳೆಗಾರ ಬಸಣ್ಣ!

■ ಪ್ರಕಾಶ ಎಸ್. ಮನ್ನಂಗಿ

ನಮ್ಮೂರ ಕೇರಿಗೆ ಬಳೆಗಾರ ಬರಲು
ಪೂರ್ವ ದಿಗಂತದಿ ರಂಗು ಮೂಡಿತ್ತು
ಬುಟ್ಟಿಯ ತುಂಬ ತರ ತರ ಬಣ್ಣದ
ಚಂದದ ಬಳೆಗಳ ಮಲ್ಲಾರ ತುಂಬಿತ್ತು

ಕೆಂಪು, ಗುಲಾಬಿ, ಹಸಿರು ಬಣ್ಣದ ಬಳೆಯು
ಫಳ ಫಳ ಮಿಂಚುತ ನಗುವನು ಬೀರಿತ್ತು
ಕೇಸರಿ, ಹಳದಿ, ನೀಲಿ ಬಣ್ಣದ ಬಳೆಗಳ
ಮಲ್ಲಾರ ಕೂಗಿ ನಾವೇನ್ ಕಮ್ಮಿ ಎಂದಿತ್ತು

ಬಳೆಗಾರ ಬಸಣ್ಣ ಬಾರೋ ಗೌಡರ ಮನಿಗೆ
ಎನ್ನುವ ಚಿಣ್ಣರ ಬಳಗದ ಕೂಗು ಕೇಳಿತ್ತು
ಪಡಸಾಲೆಯೊಳು ಚಾಪೆಯ ಸುರುಳಿಯ ಹಾಸಿ
ಕೆಳಗಡೆ ಬುಟ್ಟಿಯ ಇಳುವಿ ಕುಂತಾಯ್ತು

ಮ್ಯಾಚಿಂಗ್ ಬಳೆಗಳು, ಮೋಜಿನ ಬಳೆಗಳು
ಕಾಲೇಜ್ ಯುವತಿಯರ ಕೈಗಳ ಪಾಲಾಯ್ತು
ಚಿಕ್ಕ ಬಾಲಕಿಯರಿಗೆ ಚುಕ್ಕೆ ಬಳೆಗಳ ಮೋಹ
ಮುದುಕಿಯರ ಕೈಗೆ ಹಸಿರು ಬಳೆ ಬೇಕಾಯ್ತು

ಎಲ್ಲರ ಕೈಗೆ ಬಳೆಗಳ ತೊಡಿಸಿ ವಿದಾಯ ಹೇಳಿದ
ಬಳೆಗಾರ ಮುಂದಿನ ಮನೆಗೆ ಹೊರಟಾಯ್ತು ■